**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 2779/2022**

**ಸಾಕ್ಷಿಗೆ ದಿನಾಂಕ 22.4.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದೇವರಾಜ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಕೆಂಪಯ್ಯ | ಸಿ.ಡಬ್ಲ್ಯೂ-4 |
| ವಯಸ್ಸು | : | 25 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕುರ್ಣೇಗಾಲ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸ 1 ರಿಂದ 3 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ದಿನಾಂಕ 20.2.2021 ರಂದು ಮದ್ಯಾಹ್ನದ ಸಮಯದಲ್ಲಿ ನಾನು ಮತ್ತು ಚಾಸ 3 ರವರು ಕೆಲಸದ ನಿಮಿತ್ತ ಬೈಕಿನಲ್ಲಿ ಹೆಡಿಯಾಲಕ್ಕೆ ಹೋಗಿ ವಾಪಸ್ ಊರಿಗೆ ಯಡಿಯಾಲ-ಚಿಕ್ಕಬರಗಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಚನ್ನಗುಂಡಿ ಗೇಟ್ ಬಳಿ ಬಂದಾಗ ಚಾಸ 2 ರವರಿಗೆ ನ್ಯಾಯಾಲಯದ ಮುಂದಿರುವ ಬೈಕು ಡಿಕ್ಕಿ ಮಾಡಿ ಅವರು ಸ್ಥಳದಲ್ಲಿ ಬಿದ್ದಿದ್ದರು. ಸ್ಥಳದಲ್ಲಿ ಆರೋಪಿಗೆ ಸಂಬಂಧಪಟ್ಟ ಬೈಕು ಸಹ ಬಿದ್ದಿತ್ತು. ನಂತರ ನಾವು ಅಂಬುಲೆನ್ಸಗೆ ಫೋನ್ ಮಾಡಿದ್ದು ಅಂಬುಲೆನ್ಸನಲ್ಲಿ ಚಾಸ 2 ರವರನ್ನು ಸರಗೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಈಗ ನೋಡುತ್ತಿರುವ ನಿಪಿ2 ರಿಂದ ನಿಪಿ5 ಭಾವಚಿತ್ರದಲ್ಲಿರುವ ಬೈಕುಗಳು ಸದರಿ ಸ್ಥಳದಲ್ಲಿ ಬಿದ್ದಿದ್ದವು. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎಂದು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದನ್ನು ಸರಗೂರು ಠಾಣೆಯಲ್ಲಿ ಅಪಘಾತವಾದ 3 ದಿನಗಳ ನಂತರ ಮಾಡಿರುತ್ತಾನೆ. ಸದರಿ ದಿನ ಸರಗೂರು ಪೋಲಿಸರು ಅಪಘಾತಕ್ಕೆ ಸಂಬಂಧಪಟ್ಟ 2 ಬೈಕುಗಳನ್ನು ಅಮಾನತ್ತುಪಡಿಸಿಕೊಂಡು ಠಾಣೆಯಲ್ಲಿ ಅಮಾನತ್ತು ಪಂಚನಾಮೆಯನ್ನು ಮಾಡಿದ್ದು ಸದರಿ ಅಮಾನತ್ತು

ಪಂಚನಾಮೆಗೆ ನಾನು ಮತ್ತು ಚಾಸ 2 ರವರು ಸಹಿ ಮಾಡಿರುತ್ತೇವೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ ಎಪಿಪಿ ರವರಿಂದಃ**

ಸದರಿ ದಿನ ನಾನು ಮತ್ತು ಚಾಸ 3 ರವರು ನಮ್ಮ ಊರಿಗೆ ಹೋಗಲು ಚನ್ನಗುಂಡಿ ಗೇಟ್ ಬಳಿ ಹೋಗುತ್ತಿದ್ದಾಗ ನಮ್ಮ ಮುಂಭಾಗದಲ್ಲಿ ಚಾಸ 2 ರವರು ಅವರ ಬೈಕಿನಲ್ಲಿ ಹೋಗುತ್ತಿದ್ದು ಆಗ ನಮ್ಮ ಎದುರುಗಡೆಯಿಂದ ನ್ಯಾಯಾಲಯದ ಮುಂದಿರುವ ಆರೋಪಿಯು ತನ್ನ ಬೈಕನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಮುಂದೆ ಹೋಗುತ್ತಿದ್ದ ಚಾಸ 2 ರವರ ಬೈಕಿಗೆ ಡಿಕ್ಕಿ ಮಾಡಿರುತ್ತಾನೆ ಎಂದರೆ ಸರಿ. ಆ ರೀತಿ ಡಿಕ್ಕಿ ಮಾಡಿದ್ದರಂದ ಚಾಸ 2 ರವರ ಮೂಗಿನ ಮೂಳೆ ಮುರಿತವಾಗಿರುತ್ತದೆ ಎಂದರೆ ಸರಿ. ನಂತರ ಚಾಸ 2 ರವರ ಬೈಕಿಗೆ ಡಿಕ್ಕಿ ಮಾಡಿದ ಬೈಕನ್ನು ನೋಡಲಾಗಿ ಅದು ಹೋಂಡಾ ಶೈನ್ ಬೈಕಾಗಿದ್ದು ಅದರ ಚಾಸಿಸ್ ನಂಬರ್ ಎಂಇ 4 ಜೆಸಿ856 ಎಲ್ಎಲ್ಜಿ042648 ಆಗಿದ್ದು ಸದರಿ ಬೈಕ್ ಚಾಲಕನ ಹೆಸರು ಚನ್ನಗುಂಡಿ ಗ್ರಾಮದ ರೇವಣ್ಣ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ನಂತರ ಚಾಸ 2 ರವರನ್ನು ವಿಚಾರಿಸಿದಾಗ ನಂಜನಗೂಡು ತಾಲ್ಲೂಕಿನ ಹುರ ಪಕ್ಕದಲ್ಲಿರುವ ಚಿಕ್ಕಚನ್ನಪ್ಪನ ದೇವಸ್ಥಾನದಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾಗಲು ಪುಟ್ಟರಂಗಯ್ಯನವರ ಬಾಬ್ತು ಬೈಕ್ ನಂಬರ್ ಕೆಎ 10 ವಿ1378 ಬೈಕನ್ನು ತೆಗೆದುಕೊಂಡು ಬಂದಿದ್ದು ಚಾಸ 1 ರವರು ಬೈಕನ್ನು ಚಲಾಯಿಸುತ್ತಿದ್ದರು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ವಿಚಾರವಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ**

ನಾನು, ಚಾಸ 2, 3, 5 ಮತ್ತು 6 ರವರು ಒಂದೇ ಊರಿನವರು ಎಂದರೆ ಸರಿ. ನಾವು ಸದರಿ ದಿನ ಹೆಡಿಯಾಲದಿಂದ ಹೊರಟಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾವು ಹಅಪಘಾತ ಸ್ಥಳಕ್ಕೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಚನ್ನಗುಂಡಿ ಗೇಟ್ ಹತ್ತಿರ ಹೆಡಿಯಾಲಂದ ಚನ್ನಗುಂಡಿ ಕಡೆಗೆ ರಸ್ತೆಯು ಏರುಮುಖವಾಗಿದ್ದು ತಿರುವು ಇರುತ್ತದೆ ಎಂದರೆ ಸರಿ. ಚನ್ನಗುಂಡಿಯಿಂದ ಬರುವ ವಾಹನಗಳು ನಿಧಾನವಾಗಿ ಬರಬೇಕು ಎಂದರೆ ಸರಿ. ಅಪಘಾತಕ್ಕೊಳಪಟ್ಟಿರುವ ವಾಹನದ ನೋಂದಣಿ ಸಂಖ್ಯೆಯನ್ನು ನನಗೆ ಹೇಳಲು ಸಾಧ್ಯವಿಲ್ಲ. ನಾನು ಸದರಿ ಸ್ಥಳಕ್ಕೆ ಹೋದಾಗ ಅಪಘಾತವಾಗಿ ಅರ್ಧ ಗಂಟೆಯಾಗಿತ್ತು. ನಾನು ಸದರಿ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಅಪಘಾತವನ್ನು ಕಣ್ಣಾರೆ ನೋಡದಿರುವುದರಿಂದ ಸದರಿ ಅಪಘಾತವು ಯಾರ

ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಅಪಘಾತದ ಬಗ್ಗೆ ಯಾವುದೇ ವಿಚಾರ ಗೊತ್ತಿರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿಪಿ6 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ